ಸಮುದಾಯ ಆರೋಗ್ಯ ಕೋಶದ ಬೆಳ್ಳಿಹಬ್ಬದ ಪ್ರಕಾಶನ

ಸಮತೆ ಮತ್ತು ಅಸಮತೆ

ಆರೋಗ್ಯದ ಸಾಮಾಜಿಕ ನಿರ್ಧಾರಕಗಳ ಕುರಿತು ವಿಶ್ಲೇಷಣೆ ಮತ್ತು ಟಿಪ್ಪಣಿ

-ನಾದಿನ್ ಗ್ಯಾಸ್‌ಮನ್ ಹಾಗೂ ಮಾಕ್ಸಿನ್ ಹಾರ್ಟ್

ಪ್ರಕಾಶಕರು

ಸಮುದಾಯ ಆರೋಗ್ಯ ಕೋಶ

COMMUNITY HEALTH CELL

ನಂ.359, 1ನೇ ಮುಖ್ಯರಸ್ತೆ, 1ನೇ ಬಡಾವಣೆ,ಕೋರಮಂಗಲ, ಬೆಂಗಳೂರು - 560 034.

ದೂರವಾಣಿ : 080-25531518 ಟೆಲಿಫ್ಯಾಕ್ಸ್: 080-25525372

ಈಮೇಲ್ : chc@sochara.org ವೆಬ್‌ಸೈಟ್ :www.sochara.org

CHC Silver Jubilee
1984-2009

ಸಮತೆ ಮತ್ತು ಅಸಮತೆ – ಆರೋಗ್ಯದ ಸಾಮಾಜಿಕ ನಿರ್ಧಾರಕಗಳ ಕುರಿತು ವಿಶ್ಲೇಷಣೆ ಮತ್ತು ಟಿಪ್ಪಣಿ

ಲೇಖಕರು : ನಾದಿನ್ ಗ್ಯಾಸ್‌ಮನ್ ಹಾಗೂ ಮಾರ್ಕಿನ್ ಹಾರ್ಟ್

ಮೂಲ ಕೃತಿ : Equity and Inequity today - some contributing social factors (PHM reflection papers)

ಲೇಖಕರ ಪರಿಚಯ

ನ್ಯಾಡಿನ್ ಗ್ಯಾಸ್‌ಮನ್ ಮತ್ತು ಮ್ಯಾಕ್ಸಿನ್ ಹಾರ್ಟ್

ನ್ಯಾಡಿನ್ ಗ್ಯಾಸ್‌ಮನ್ ಇವರು ಮೆಕ್ಸಿಕೋ ದೇಶದ ವೈದ್ಯರು ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಡಾಕ್ಟರೇಟ್ ಪದವೀಧರರಾಗಿರುತ್ತಾರೆ. ಹಲವಾರು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಆರೋಗ್ಯ ಮತ್ತು ಆರೋಗ್ಯ ನೀತಿಗಳ ಬಗ್ಗೆ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಜಾಗತಿಕ ಆರೋಗ್ಯ ಸಭೆಗಾಗಿ ಇವರು ಬರೆದ ಹಲವಾರು ವಿಶ್ಲೇಷಣಾ ಪ್ರಬಂಧಗಳ ಸಂಯೋಜಕರಾಗಿದ್ದರು.

ಮ್ಯಾಕ್ಸಿನ್ ಹಾರ್ಟ್ ಇವರು ದಕ್ಷಿಣ ಆಫ್ರಿಕಾದೇಶದ ಸಮಾಜ ಸೇವಾ ಕ್ಷೇತ್ರದಲ್ಲಿ ಸೇವಾ ನಿರತರಾಗಿದ್ದು , ಮಾನವ ಅಭಿವೃದ್ಧಿಯ ನೀತಿಗಳ ಬಗ್ಗೆ ಅನುಭವ ಹೊಂದಿರುತ್ತಾರೆ. ಈಕೆ ದಕ್ಷಿಣ ಆಫ್ರಿಕಾ ದೇಶದ ವರ್ಣಭೇದ ನೀತಿಯ ನಿರ್ಮೂಲನೆ ನಂತರ ಮಾನವ ಅಭಿವೃದ್ಧಿ ನೀತಿಗಳನ್ನು ಮತ್ತು ರಾಷ್ಟ್ರೀಯ ಸಂಸ್ಥೆಗಳನ್ನು ಪುನರ್‌ರಚನೆ ಮಾಡಲು ಕೊಡುಗೆ ನೀಡಿದ್ದಾರೆ.

ಮೂಲ ಪ್ರಕಾಶನ : ಅಂತಾರಾಷ್ಟ್ರೀಯ ಜನಾರೋಗ್ಯ ಆಂದೋಲನ (PHM)

ಕನ್ನಡಕ್ಕೆ ಅನುವಾದ ಮತ್ತು ಪ್ರಕಾಶನ : ಸಮುದಾಯ ಆರೋಗ್ಯ ಕೋಶ, (SOCHARA ದ ಪರವಾಗಿ)
ಕೋರಮಂಗಲ, ಬೆಂಗಳೂರು–34

ಅನುವಾದ ಮತ್ತು ಸಾಹಿತ್ಯಕ್ಕೆ ಸಹಾಯ : ಶ್ರೀಮತಿ ಶಾರದಾ ದಾಬಡೆ

ಮೊದಲ ಆವೃತ್ತಿ : ಡಿಸೆಂಬರ್ 2008

ಸೂಚಿತ ಕೊಡುಗೆ :

We are thankful to Sir Ratan Tata Trust, Mumbai,
for the support towards the publication of this book.

ಮುನ್ನುಡಿ

ಆರೋಗ್ಯ ಎಂದರೆ ಬರೀ ವೈದ್ಯರು–ಆಸ್ಪತ್ರೆ–ಔಷಧಿ ಎಂಬ ಜೈವಿಕ ಔಷಧಿಯ ಬಲವಾದ ನಂಬಿಕೆಯ 1984 ರ ಕಾಲಘಟ್ಟದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಸಮುದಾಯ ಆರೋಗ್ಯ ಎಂಬುದು ಇನ್ನೂ ಬಾಲ್ಯಾವಸ್ಥೆಯಲ್ಲಿರುವಾಗ ಸಮುದಾಯ ಆರೋಗ್ಯ ಕೋಶ (CHC) ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಹಲವಾರು ಸಮುದಾಯಗಳೊಂದಿಗೆ ಬೆರೆತು ತರಬೇತಿ, ಸಂಶೋಧನೆ, ಆರೋಗ್ಯ ಹಕ್ಕಿನ ವಕಾಲತ್ತುಗಳೊಂದಿಗೆ 25 ವರ್ಷಗಳ ಹಾದಿ ತುಳಿದು ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಪೀಪಲ್ಸ್ ಹೆಲ್ತ್ ಮೂವ್‌ಮೆಂಟ್‌ನ ಭಾಗವಾಗಿ ಜನಾರೋಗ್ಯ ಆಂದೋಲನ ಬೆಳೆದದ್ದು ಒಂದು ಮಹತ್ವಪೂರ್ಣ ಮೈಲಿಗಲ್ಲು ಆಗಿದೆ. ಈ ಕಾಲು ಶತಕದ ಪ್ರಯಾಣದಲ್ಲಿ ಬಹಳಷ್ಟು ಸ್ನೇಹಿತರನ್ನು, ಸಾರ್ವಜನಿಕ ಆರೋಗ್ಯ ಕ್ಷೇತ್ರದ ಹಿರಿಯರನ್ನು, ಆರೋಗ್ಯವನ್ನು ವಿಶಾಲವಾದ ಸಾಮಾಜಿಕ ನ್ಯಾಯದ ದೃಷ್ಟಿಕೋನದಲ್ಲಿ ನೋಡಲಿಚ್ಚಿಸುವ ಯುವಜನರನ್ನು, ತಳ ಸಮುದಾಯದ ಹಲವಾರು ಜನ–ಸಂಘಟನೆಗಳನ್ನು ಸೇರಿಸಿ ಒಂದು ರೀತಿಯಲ್ಲಿ ಸಂಘಟಿತ ಪ್ರಯತ್ನವನ್ನು ಮಾಡುವುದೇ ಒಂದು ಧ್ಯೇಯ ಮತ್ತು ತಂತ್ರವನ್ನಾಗಿರಿಸಿದ್ದು ಸಮುದಾಯ ಆರೋಗ್ಯ ಕೋಶದ ವೈಶಿಷ್ಟ್ಯ.

1984–1989 ರ ಅವಧಿಯಲ್ಲಿ ಅಧ್ಯಯನ–ಮನನ–ಕಾರ್ಯ ಮಾಡುವ ಸಣ್ಣ ತಿರುಳು ಗುಂಪಾಗಿ ಕಾರ್ಯ ನಿರ್ವಹಿಸಿದ್ದು, 1990 ರಲ್ಲಿ ಹಲವಾರು ಹಿರಿಯರ ಸಲಹೆಯಂತೆ, ಎಲ್ಲರನ್ನೊಳಗೊಂಡ **'ಸೊಸೈಟಿ ಫಾರ್ ಕಮ್ಯುನಿಟಿ ಹೆಲ್ತ್ ಅವೇರ್‌ನೆಸ್, ರಿಸರ್ಚ್ ಅಂಡ್ ಆ್ಯಕ್ಷನ್'** (SOCHARA) ಆಗಿ ರೂಪುಗೊಂಡಿತು. ಈ ಸಮಯದಲ್ಲಿ ಭಾರತದಲ್ಲಿರುವ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲಾ ವ್ಯಕ್ತಿಗಳು, ಸಂಸ್ಥೆ–ಸಂಘಟನೆಗಳ ಒಕ್ಕೂಟ / ಕಾರ್ಯಜಾಲಗಳ ಜೊತೆ ಸಂಪರ್ಕ ಬೆಳೆಸಿದ್ದು, 1994–1997 ರಲ್ಲಿ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ತರಬೇತಿ ನೀಡುವಂತಹ ತಂಡವೆನಿಸಿಕೊಂಡಿತು. 1998–2006ರ ಸಮಯದಲ್ಲಿ ಆರೋಗ್ಯ ಕ್ಷೇತ್ರವೇ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ಸುಳಿಯಲ್ಲಿ

CHC Silver Jubilee
1984-2009

ತತ್ತರಿಸುತ್ತಿರುವಾಗ, ಆರೋಗ್ಯ ನೀತಿಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಜನಪರ/ಶೋಷಿತರ ಪರ ನೀತಿಗಳನ್ನಾಗಿ ಮಾಡಲು ಸಮುದಾಯ ಆರೋಗ್ಯ ಕೋಶ (CHC) ಶ್ರಮಿಸಿದೆ. ಆರೋಗ್ಯ ನೀತಿ ಇರುವ ಕೆಲವೇ ಕೆಲವು ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಆರೋಗ್ಯ ನೀತಿಯನ್ನು ಮಂಜೂರು ಮಾಡಿದ ಮೊದಲ ರಾಜ್ಯವಾಗಿದ್ದು, ಈ ಆರೋಗ್ಯ ನೀತಿಯನ್ನು ರೂಪಿಸುವಲ್ಲಿ CHC ಯ ಕೊಡುಗೆಯೂ ಬಹಳಷ್ಟು ಇದೆ. ಇದೇ ಅವಧಿಯಲ್ಲಿ ಇನ್ನೊಂದೆಡೆ ಜನಸಂಘಟನೆ ಯಲ್ಲಿ ನಂಬಿಕೆಯನಿಟ್ಟು ತಳ-ಸಮುದಾಯಗಳನ್ನು, ಶೋಷಿತ ಮತ್ತು ದಲಿತ ಸಮುದಾಯಗಳನ್ನು ಆರೋಗ್ಯದ ಹಕ್ಕೊತ್ತಾಯ ಮಾಡುವ ನಿಟ್ಟಿನಲ್ಲಿ ಜನ-ಸಂಘಟಿಸಲು ಪ್ರಯತ್ನಿಸುವ **'ಜನಾರೋಗ್ಯ ಆಂದೋಲನ - ಕರ್ನಾಟಕ'** ದ ಬೆನ್ನೆಲುಬಾಗಿ ನಿಂತಿದೆ.

ಸಮುದಾಯ ಆರೋಗ್ಯ ಕೋಶವು (CHC) ರಾಷ್ಟ್ರಮಟ್ಟದಲ್ಲಿ ಸುಮಾರು 1000 ಸಂಘ-ಸಂಸ್ಥೆ /ಸಂಘಟನೆಗಳ ಕಾರ್ಯಜಾಲವಾದ ರಾಷ್ಟ್ರಮಟ್ಟದ **'ಜನಸ್ವಾಸ್ಥ್ಯ ಅಭಿಯಾನ'**ದ ಸಂಯೋಜನಾ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 18 ಜಿಲ್ಲೆಗಳಲ್ಲಿ 200 ಕ್ಕಿಂತಲೂ ಹೆಚ್ಚು ಸಂಘ/ಸಂಸ್ಥೆ ಹಾಗೂ ಸಂಘಟನೆಗಳ ಆರೋಗ್ಯ ಕಾರ್ಯಕರ್ತರೊಂದಿಗೆ **'ಜನಾರೋಗ್ಯ ಆಂದೋಲನ-ಕರ್ನಾಟಕ'** ಆಗಿ ಕಾರ್ಯನಿರ್ವಹಿಸುತ್ತಿರುವ ಒಕ್ಕೂಟದ ಒಂದು ಸಂಪನ್ಮೂಲ ಕೇಂದ್ರವಾಗಿದೆ.

ರಜತಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಆರೋಗ್ಯ ನೀತಿಗಳ ಬಗ್ಗೆ ಹಾಗೂ ಆರೋಗ್ಯದ ಹಕ್ಕಿನ ಬಗ್ಗೆ ವಿಚಾರಗಳನ್ನು ಬೆಳೆಸಲು ಹಾಗೂ ವಿಚಾರವಂತ ಕಾರ್ಯಕರ್ತರು ಬೆಳೆಯಬೇಕೆಂಬ ನಿಟ್ಟಿನಲ್ಲಿ ಅವಶ್ಯವಿರುವ ತಾತ್ವಿಕ ಅಡಿಪಾಯಕ್ಕೆ ಆಧಾರವಾಗಿ ಸಮುದಾಯ ಆರೋಗ್ಯ ಕೋಶವು (CHC) "**ಸಮತೆ ಮತ್ತು ಅಸಮತೆ -ಆರೋಗ್ಯದ ಸಾಮಾಜಿಕ ನಿರ್ಧಾರಕಗಳ ಕುರಿತು ವಿಶ್ಲೇಷಣೆ ಮತ್ತು ಟಿಪ್ಪಣಿ**" ಎಂಬ ಈ ಕಿರುಹೊತ್ತಿಗೆಯನ್ನು ಹೊರತರುತ್ತಿದೆ.

ಇ. ಪ್ರೇಮ್‌ದಾಸ್
ಸಂಯೋಜಕರು
ಸಮುದಾಯ ಆರೋಗ್ಯ ಕೋಶ (CHC)

ಡಿಸೆಂಬರ್ 2008
ಬೆಂಗಳೂರು

CHC Silver Jubilee
1984-2009

ಸಮತೆ ಹಾಗೂ ಅಸಮತೆ

(ಆರೋಗ್ಯದ ಸಾಮಾಜಿಕ ನಿರ್ಧಾರಕಗಳ ಕುರಿತು ವಿಶ್ಲೇಷಣೆ ಮತ್ತು ಟಿಪ್ಪಣಿ)

–ನಾದಿನ್ ಗ್ಯಾಸ್‌ಮನ್ ಹಾಗೂ ಮಾರ್ಕ್ಸಿನ್ ಹಾರ್ಟ್

ಆರೋಗ್ಯ, ಜಾಗತೀಕರಣ ಮತ್ತು ಅಸಮತೆ:

ವಿಶ್ವ ಸಂಸ್ಥೆಯ 1999ರ ಮಾನವ ಅಭಿವೃದ್ಧಿ ವರದಿ ಹೀಗೆ ಆರಂಭಗೊಳ್ಳುತ್ತದೆ– 'ದೇಶದ ಬಹುದೊಡ್ಡ ಆಸ್ತಿ ಎಂದರೆ ಆ ದೇಶದ ಜನ. ಅಭಿವೃದ್ಧಿಯ ಮೂಲ ಗುರಿ ಎಂದರೆ ಆ ದೇಶದ ಜನರು ಆರೋಗ್ಯಪೂರ್ಣ ಹಾಗೂ ಸೃಜನಶೀಲ ಬದುಕನ್ನು ಪೂರ್ಣಾವಧಿ ಬದುಕಲು ಬೇಕಾದ ವಾತಾವರಣದ ನಿರ್ಮಾಣ. ಆದರೆ ಭೌತಿಕ ಹಾಗೂ ಆರ್ಥಿಕ ಸಂಪತ್ತನ್ನು ಗಳಿಸುವ ಪ್ರಯತ್ನದಲ್ಲಿ ಈ ಸರಳ, ಶಕಿಯುತವಾದ ಸತ್ಯ ಮರೆತು ಹೋಗುತ್ತಿದೆ'.

ಜಾಗತೀಕರಣದ ಇಂದಿನ ಗುರಿಯು ತದ್ವಿರುದ್ಧವಾಗಿದೆ. ಅದರ ಫಲವೂ ತದ್ವಿರುದ್ಧವಾಗಿದೆ. ಅದರ ಅಪರಿಮಿತ ವೇಗದಿಂದ, ಸಾಮಾಜಿಕ ಒತ್ತಡಗಳು ಹೆಚ್ಚಾಗಿದ್ದು, ಅವುಗಳನ್ನು ನಿರ್ವಹಿಸಲು, ಅಭಿವೃದ್ಧಿ ನೀತಿಗಳಿಗೆ ಸಾಧ್ಯವಾಗುತ್ತಿಲ್ಲ. ಜಗತ್ತಿನಲ್ಲಿ ಇಂದು ಕೊರತೆ ಹಾಗೂ ಅಸಮಾನತೆಗಳು ಅಗಾಧವಾಗಿವೆ. ಎಲ್ಲಿ ನೋಡಿದರೂ ಬಡತನ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಶತಕೋಟಿಗೂ ಹೆಚ್ಚು ಜನರಿಗೆ ಬದುಕಲು ಬೇಕಾದ ಮೂಲಭೂತ ಹಕ್ಕುಗಳೇ ಇನ್ನೂ ಕೈಗೆಟುಕಿಲ್ಲ.

ಆರ್ಥಿಕ ಸೌಕರ್ಯಗಳು ಹೆಚ್ಚಿದ್ದವೆಂದರೆ, ಸಾಮಾಜಿಕ ಸಮಸ್ಯೆ ತಾವೇ ತಾವಾಗಿ ಪರಿಹಾರವಾಗುತ್ತವೆ, ಚೆನ್ನಾಗಿ ಕೆಲಸ ಮಾಡುತ್ತಿರುವ ಮಾರುಕಟ್ಟೆಯು ಸಂಪತ್ತನ್ನು ಸೃಷ್ಟಿಸುವುದರೊಂದಿಗೆ ಮಾನವ ಕಲ್ಯಾಣವನ್ನೂ ಮಾಡುತ್ತದೆ ಎಂಬುದು ಮಾರುಕಟ್ಟೆ ನೀತಿಯ ಆಶಯವಾಗಿತ್ತು. 'ಖಾಸಗಿ ಸಂಸ್ಥೆಗಳ ಮಧ್ಯೆ ಇರುವ ಸ್ಪರ್ಧೆಯೇ ಆರ್ಥಿಕತೆಯನ್ನು ನಿಯಂತ್ರಣದಲ್ಲಿಟ್ಟಿರುತ್ತದೆ. ಈ ಖಾಸಗಿ ವ್ಯವಸ್ಥೆಗಳು



ಸರಿಯಾಗಿ ನಿರ್ವಹಿಸಿಕೊಂಡು ಹೋಗುವಂತೆ ಮೂಲ ಸೌಕರ್ಯಗಳನ್ನು ಒದಗಿಸುವ ಮತ್ತು ಸಮಾಜದ ಅತ್ಯಂತ ದುರ್ಬಲ ಜನ ವರ್ಗವನ್ನು ಕಾಪಾಡುವ ಹೊಣೆ ಮಾತ್ರ ಸಾರ್ವಜನಿಕ ವಲಯದ್ದು. ಎಂದು 1980ರಲ್ಲಿ ನವ ಉದಾರವಾದಿಗಳು ಭವಿಷ್ಯ ನುಡಿದಿದ್ದರು.

ಆದರೆ ಅದು ಸಾಧ್ಯವೇ ಇಲ್ಲ ಎಂಬುದು ನಮಗೆ ಛಾಟಿಯೇಟಿನಷ್ಟು ನಿಚ್ಚಳವಾಗಿದೆ. ವಿಶ್ವಸಂಸ್ಥೆಯ ಸಾಮಾಜಿಕ ಅಭಿವೃದ್ಧಿ ಸಂಶೋಧನಾ ಸಂಸ್ಥೆಯು ಇದನ್ನು ಬಹಳ ಅಪಾಯಕಾರಿ ಅಭಿಪ್ರಾಯ ಎಂದು ಹೇಳುತ್ತದೆ. ಲಕ್ಷಾಂತರ ಜನ ಮೊದಲಿಗಿಂತ ಬಡವರಾಗುತ್ತಿದ್ದಾರೆ. ಸಾಲದ ಕೂಪದಲ್ಲಿ ಸಿಕ್ಕಿಕೊಂಡಿರುವ ಆಫ್ರಿಕಾ ಹಾಗೂ ದಕ್ಷಿಣ ಅಮೆರಿಕಾ ಮುಂತಾದ ಬಡದೇಶಗಳಲ್ಲಿ ಬದುಕಿನ ಮಟ್ಟ ಬಹಳ ಕುಸಿದಿದೆ. ಆರ್ಥಿಕವಾಗಿ ಬಲಾಢ್ಯ ದೇಶಗಳೂ ಸಹ ಇಂದು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಮಾತ್ರವಲ್ಲ ಬಡವರು–ಶ್ರೀಮಂತರ ನಡುವಿನ ಅಂತರ, ಬಡದೇಶ–ಶ್ರೀಮಂತ ದೇಶಗಳ ನಡುವಿನ ಅಂತರ ಹೆಚ್ಚಾಗುತ್ತಿದೆ. ಎಷ್ಟೋ ದೇಶಗಳಲ್ಲಿ ಮಾನವೀಯ ಸಂಬಂಧಗಳನ್ನು ಹೆಣೆದಿದ್ದ ದಾರವು ಹರಿದಿದ್ದು, ಸಾಮಾಜಿಕ ತಳಮಳ ಹೆಚ್ಚಿ , ಹೆಚ್ಚು ಅಪರಾಧ, ಹೆಚ್ಚು ಹಿಂಸೆಯನ್ನು ಇಂದು ನಾವು ಕಾಣಬಹುದು.

1980 ಹಾಗೂ 1990ರ ನಡುವೆ ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ತಲಾದಾಯ ಕುಸಿಯಿತು. ಆಫ್ರಿಕಾದ 28 ದೇಶಗಳಲ್ಲಿ ನಿಜ ವೇತನ 20%ದಷ್ಟು ಕಡಿಮೆಯಾಗಿದೆ, ಹಾಗೂ ಆಫ್ರಿಕಾದ ಈ ದೇಶಗಳ 50%ರಷ್ಟು ಜನರು ಕಡು ಬಡವರಾಗಿ ಬದುಕುತ್ತಿದ್ದಾರೆ. ದಕ್ಷಿಣ ಅಮೆರಿಕಾದ ಕೆಲವು ದೇಶಗಳಲ್ಲಿ ನಿಜವೇತನ 50%ರಷ್ಟು ಕುಸಿದಿದೆ. ಅದು ಸಾಲದು ಎಂಬಂತೆ ಅಪೌಷ್ಠಿಕತೆ, ಆರೋಗ್ಯ, ಶಿಕ್ಷಣ ಹಾಗೂ ಸಾರಿಗೆಯಂತಹ ಕ್ಷೇತ್ರದಲ್ಲಿ ಸಾರ್ವಜನಿಕ ವಲಯವು ಬಂಡವಾಳ ಹಾಕದಿರುವುದರಿಂದ ಜನರ ಪರಿಸ್ಥಿತಿ ಮತ್ತಷ್ಟು ಹೀನಾಯವಾಗಿದೆ.

ಉದಾರೀಕರಣ ಬೇಕೆಂದವರು ಭವಿಷ್ಯದಲ್ಲಿ ಬಹಳ ಶ್ರೀಮಂತರಾಗಲು ವರ್ತಮಾನದ ಸಾಮಾಜಿಕ ಭದ್ರತೆಗಳನ್ನೆಲ್ಲ ಕಿತ್ತೊಗೆಯುವ ಯೋಜನೆಗಳನ್ನು ಮಾಡಿದರು. ಆದರೆ, ಸಾಮಾಜಿಕ ಅವ್ಯವಸ್ಥೆಯಿಂದ ಆರ್ಥಿಕ ವ್ಯವಸ್ಥೆಯ ಮೇಲೂ ದುಷ್ಪರಿಣಾಮ ಆಗಬಹುದು ಎಂಬ ಕಲ್ಪನೆ ಅವರಿಗೆ ಇರಲಿಲ್ಲ. ಸರಕಾರವೂ ಕೊಡದೆ, ತಾವೇ ಖರೀದಿ ಮಾಡಲು ಹಣವೂ ಇಲ್ಲದೆ ಹೋದಾಗ ಬಡತನವು ಮತ್ತಷ್ಟು ಆಳವಾಗಿ ಸಮುದಾಯದ

ಒಳಹೊಕ್ಕುತ್ತದೆ. ಜಾಗತೀಕರಣದಿಂದ ಸಂಪತ್ತು ಶೇಖರಣೆಯಾಗಬಹುದು, ಆದರೆ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಮಾರುಕಟ್ಟೆಯು ಬಹಳ ಕೈತೂರಿಸಿದಾಗ ಅದರ ಫಲವು ಎಲ್ಲರಿಗೂ ಸಮನಾಗಿ ಹಂಚಿಕೆಯಾಗುವುದಿಲ್ಲ, ಸಂಪತ್ತು ಕೆಲವೇ ಜನರ ಕೈಯಲ್ಲಿ ಮಾತ್ರ ಶೇಖರಣೆಯಾಗುತ್ತದೆ. ಹಲವರು ಅಂಚಿಗೆ ತಳ್ಳಲ್ಪಡುತ್ತಾರೆ. ದೇಶವು ಆರ್ಥಿಕವಾಗಿ ಮುಂದುವರಿದರೂ, ಸಾಮಾಜಿಕವಾಗಿ, ರಾಜಕೀಯವಾಗಿ ನಾಶವಾಗಿ ಬಿಡುತ್ತದೆ.

ಅಭಿವೃದ್ಧಿಗೆ ಆರ್ಥಿಕ ಬೆಳೆವಣಿಗೆಯೂ ಬೇಕು ನಿಜ. ಆದರೆ ಆರ್ಥಿಕ ಅಭಿವೃದ್ಧಿಯಿಂದ ಬಂದ ಲಾಭವನ್ನು ಮಾನವ ಅಭಿವೃದ್ಧಿ ಕಾರ್ಯಕ್ರಮಗಳಾದ ಶಾಲೆಗಳು, ಆರೋಗ್ಯ ಕೇಂದ್ರಗಳಲ್ಲಿ ಸರಿಯಾಗಿ, ಸಮನಾಗಿ ತೊಡಗಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ. ಬದಲಿಗೆ ಆ ಹಣವನ್ನು ಶಸ್ತ್ರಾಸ್ತ್ರ ಖರೀದಿಗೆ ಹಾಕಿದರೆ ಅದು ಅಸಮಾನತೆಯನ್ನು ಹೆಚ್ಚಿಸದೆ ಇನ್ನೇನು ಮಾಡೀತು?

ಅಸಮತೆಯನ್ನು ರೂಪಿಸುವ ಅಂಶಗಳು:

ವಿವಿಧ ಸಂಸ್ಥೆಗಳು

'ಒಂದೊಂದು ಸಮಾಜವೂ ಒಡೆದು ಚೂರಾಗಬಾರದೆಂದರೆ, ಸ್ಥಿರತೆ ಇರಬೇಕೆಂದರೆ ಗಟ್ಟಿಮುಟ್ಟಾದ ಸಂಸ್ಥೆಗಳು ಇರಬೇಕು. ಅವಿಲ್ಲವೆಂದರೆ ಆರ್ಥಿಕ ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆ ಮುಂತಾದ ಜಾಗತೀಕರಣದ ಲಾಭವೆಲ್ಲ ಸರಿಯಾಗಿ ಎಲ್ಲರನ್ನೂ ತಲುಪದೆ ಕೆಲವರ ಕೈಯಲ್ಲಿ ಮಾತ್ರವೇ ಉಳಿದುಬಿಡುತ್ತದೆ. ಫಲವಾಗಿ ಸಾಮಾಜಿಕ ಅಸಮಾನತೆ ಮತ್ತಷ್ಟು ಹೆಚ್ಚಾಗುತ್ತದೆ' ಎಂದು ವಿಶ್ವ ಬ್ಯಾಂಕ್ 1977ರಲ್ಲಿಯೇ ಎಚ್ಚರಿಸಿತ್ತು.

ಆದರೆ 'ಸಾಮಾಜಿಕ ಸಂಸ್ಥೆಗಳನ್ನು ಪ್ರಗತಿವಿರೋಧಿ ಎಂದು ಪರಿಗಣಿಸಿ, ನಿರ್ದಯವಾಗಿ ಛಿದ್ರಗೊಳಿಸಲಾಗಿದೆ. ಇದು ಎಲ್ಲಾ ಹಂತಗಳಲ್ಲೂ ಆಗಿದೆ. ರಾಷ್ಟ್ರಮಟ್ಟದಲ್ಲಿ ಎಷ್ಟೋ ಸರ್ಕಾರಿ ಸಂಸ್ಥೆಗಳನ್ನು ಮುಚ್ಚಲಾಗಿದೆ. ಸ್ಥಳೀಯ ಮಟ್ಟದಲ್ಲಿ, ಸಮುದಾಯದ ಸಂಸ್ಥೆಗಳನ್ನು ಹಾಗೂ ಕುಟುಂಬ ವ್ಯವಸ್ಥೆಗಳನ್ನು ಮಾರುಕಟ್ಟೆ ವ್ಯವಸ್ಥೆಯು ಕಡೆಗಣಿಸುತ್ತದೆ'.

ಸರ್ಕಾರ ಹಾಗೂ ಸಮಾಜದ ನಡುವೆ ಔಪಚಾರಿಕ ಸಂಬಂಧ ಇತ್ತು. ಆದರೀಗ ಅದೂ ಮಾಯವಾಗುತ್ತಿದೆ. ಸರ್ಕಾರಗಳು ಸ್ವತಹ ದುರ್ಬಲಗೊಂಡು, ಜನರಿಗೆ ಆಹಾರ, ಆರೋಗ್ಯ, ಶಿಕ್ಷಣ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದನ್ನು ಅದು ತನ್ನ ಅಂಗಸಂಸ್ಥೆಗಳಿಗೆ ದಾಟಿಸುತ್ತಿದೆ.

ನಿಯಂತ್ರಣ ಮಾಡಬೇಕಾದ ಸರ್ಕಾರಗಳೇ ದುರ್ಬಲಗೊಂಡಾಗ ಅದರ ಅಂಗ ಸಂಸ್ಥೆಗಳಾದರೂ ಎಲ್ಲಿ ಸರಿಯಾಗಿ ಕೆಲಸವನ್ನು ಮಾಡಬೇಕು? ಅವು ತಮ್ಮ ಜವಾಬ್ದಾರಿಯನ್ನು ಸರ್ಕಾರೇತರ ಸಂಸ್ಥೆಗಳು, ಸಮುದಾಯಗಳು ಹಾಗೂ ಕುಟುಂಬಗಳಿಗೆ ವಹಿಸಿಬಿಡುತ್ತವೆ.

ಸಂಸ್ಥೆಗಳು ಛಿದ್ರಗೊಂಡಿರುವ ಕಾರಣದಿಂದ ರಾಜಕೀಯ ಪಕ್ಷಗಳು ಕೂಡ ಒಡೆದು ಚೂರಾಗಿವೆ. ಕಾರ್ಮಿಕ ಸಂಘಗಳು ಕುಸಿದು ಬಿದ್ದಿವೆ ಹಾಗೂ ಬದಲಾಗಿರುವ ವೃತ್ತಿ ವ್ಯವಸ್ಥೆಯಿಂದ ಅವು ಒದ್ದಾಡುತ್ತಿವೆ. ನಿರುದ್ಯೋಗ ಜಾಸ್ತಿ ಇರುವ ದೇಶಗಳಲ್ಲಿ ಉದ್ದಿಮೆಗಳ ಮಾಲೀಕರು, ಕಾರ್ಮಿಕ ಸಂಘಗಳನ್ನು ಕಡೆಗಣಿಸಿ ಕೆಲಸಗಾರರನ್ನು ನೇರವಾಗಿ ಎದುರಿಸುತ್ತಿದ್ದಾರೆ.

ಸರ್ಕಾರಗಳಿಗೆ ಸಾಮರ್ಥ್ಯವಿಲ್ಲದಿರುವ ಕಾರಣಕ್ಕೆ ಸರ್ಕಾರೇತರ ಸಂಸ್ಥೆಗಳು ಹೆಚ್ಚೆಚ್ಚು ಪ್ರಭಾವಶಾಲಿಯಾಗುತ್ತಿವೆ. ಈ ಸಂಸ್ಥೆಗಳನ್ನು ನಿಯಂತ್ರಣದಲ್ಲಿಡುವುದು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ.



ದೇಶೀ ವ್ಯವಸ್ಥೆಗಳು ದುರ್ಬಲಗೊಂಡು, ಕುಟುಂಬ ಹಾಗೂ ಸಮುದಾಯದ ಮೇಲೆ ಹೆಚ್ಚೆಚ್ಚು ಒತ್ತಡ ಬೀಳುತ್ತಿದ್ದಾಗ, ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಸಂತಸ. ಅವುಗಳ ಮೆಲೆ ಹಿಂದೆ ಇರುತ್ತಿದ್ದ ನಿಯಂತ್ರಣ ಇಂದು ಇಲ್ಲ. ಜಗತ್ತಿನ 33% ಸಂಪನ್ಮೂಲಗಳ ಮೇಲೆ ಹಿಡಿತ ಇಟ್ಟುಕೊಂಡು ಕೇವಲ 5% ಸಿಬ್ಬಂದಿಯನ್ನಿಟ್ಟುಕೊಂಡಿರುವ, ಬಹುರಾಷ್ಟ್ರೀಯ ಕಂಪನಿಗಳ ವಿಷಯದಲ್ಲಂತೂ ಇದು ಸತ್ಯವಾಗಿದೆ. ಅಪಾಯಕಾರಿ ವಸ್ತುಗಳನ್ನು ಮಾರಾಟ ಮಾಡುವ, ನೌಕರರನ್ನು ಕಡಿಮೆ

ವೇತನಕ್ಕೆ ತೆಗೆದುಕೊಳ್ಳುವ, ತೆರಿಗೆ ತಪ್ಪಿಸುವ, ಪರಿಸರ ನಾಶ ಮಾಡುವ ಆಪಾದನೆಗಳು ಈ ಕಂಪನಿಗಳ ಮೇಲಿವೆ. ಆದರೆ ಈ ಸಂಸ್ಥೆಗಳನ್ನು ಯಾವುದೇ ಅಂತಾರಾಷ್ಟ್ರೀಯ ಕಾಯ್ದೆಗಳಿಗೂ ಮುಟ್ಟಲಾಗುತ್ತಿಲ್ಲ. ಯಾವುದೇ ದೇಶದ ಸರ್ಕಾರ ನಿಯಂತ್ರಣ ಹೇರುವ ಪ್ರಯತ್ನ ಮಾಡಿದರೆ ಈ ಕಂಪನಿಗಳು ಬೇರೆ ದೇಶಕ್ಕೆ ವಲಸೆ ಹೋಗುವ ಬೆದರಿಕೆಯನ್ನು ಹಾಕುತ್ತವೆ.

ಶಿಕ್ಷಣ :



ಕಡಿಮೆ ಗುಣಮಟ್ಟ ಹಾಗೂ ಅಸಮಾನತೆಗಳು ನಮ್ಮ ದೇಶದ ಶಿಕ್ಷಣದ ಮೂಲ ಗುಣಗಳು. ಶಾಲಾ ಪ್ರವೇಶದಲ್ಲಿ, ಹಾಜರಾತಿಯಲ್ಲಿ, ಕಲಿಸುವ ಗುಣಮಟ್ಟದಲ್ಲಿ, ಪಾಸಾಗುವ ಪ್ರಮಾಣದಲ್ಲಿ ಎಲ್ಲದರಲ್ಲೂ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಗಳು ಎದ್ದು ಕಾಣುತ್ತವೆ. ಬಡ ಮಕ್ಕಳು ಬಡ ಶಾಲೆಗಳಿಗೆ ಹೋಗುತ್ತಾರೆ. ಕಡಿಮೆ ಸೌಲಭ್ಯ, ಕಡಿಮೆ ವ್ಯವಸ್ಥೆಗಳಿಂದ ತಮ್ಮ ಶಿಕ್ಷಣವನ್ನು ಪೂರ್ತಿಗೊಳಿಸುವ ಅವಕಾಶಗಳಿಂದ ಕೂಡ ಅವರು ವಂಚಿತರಾಗುತ್ತಾರೆ.

ಸಂಪನ್ಮೂಲಗಳ ಅಸಮಾನ ಹಂಚಿಕೆ, ಅದಕ್ಷತೆ, ಪಾರದರ್ಶಕತೆ ಇಲ್ಲದಿರುವುದು, ಇವು ಹೆಚ್ಚಿನ ಶಿಕ್ಷಣ ವ್ಯವಸ್ಥೆಯಲ್ಲಿ ತುಂಬಿರುತ್ತದೆ. ಈ ಎಲ್ಲ ಕಾರಣಗಳಿಂದ ಪ್ರತಿ 7 ಮಕ್ಕಳಿಗೆ ಒಬ್ಬರು, ಶಾಲೆಯಿಂದ ಹೊರಗಿರುತ್ತಾರೆ.

ಭ್ರಷ್ಟಾಚಾರ:



ದೇಶದ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುವುದಕ್ಕೆ ಭ್ರಷ್ಟಾಚಾರವು ಒಂದು ದೊಡ್ಡ ತಡೆ. ಸಾರ್ವಜನಿಕ ಹಣವನ್ನು ಭ್ರಷ್ಟ ಅಧಿಕಾರಿಗಳು ಬಾಚಿಕೊಳ್ಳುವುದರಿಂದ, ಸರ್ಕಾರಿ ವ್ಯವಸ್ಥೆಯಲ್ಲಿ ಹಣ ಹೂಡಲು, ಹೆಚ್ಚಿನ ಜನಕ್ಕೆ ಧೈರ್ಯವಾಗುವುದಿಲ್ಲ.

ದೇಶದ ಅಭಿವೃದ್ಧಿಯಾಗಲು ಪ್ರಜೆಗಳು ಕರ ಕೊಡಬೇಕು. ಆಗಲೇ ಸರಕಾರದ ಬಳಿ ಸಂಪತ್ತು ಕ್ರೂಢೀಕರಣಗೊಂಡು ಅದನ್ನು ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಬಡತನವನ್ನು ಹೋಗಲಾಡಿಸುವುದಕ್ಕೆ ಸರಕಾರವು ವಿನಿಯೋಗಿಸಲು ಸಾಧ್ಯ. ಕರವೇ ಸಂಗ್ರಹಣೆಯಾಗದಿದ್ದರೆ ಇವನ್ನೆಲ್ಲ ಮಾಡುವುದು ಹೇಗೆ? ಭ್ರಷ್ಟ ಅಧಿಕಾರಿಗಳಿಗೆ ಇವೆಲ್ಲ ಚಿಂತೆ ಇಲ್ಲ. ಅವರು ತೆರಿಗೆ ವಂಚಕರಿಗೆ ತೆರಿಗೆ ತಪ್ಪಿಸಲು ದಾರಿ ಮಾಡಿಕೊಡುತ್ತಾರೆ. ಹೀಗೆ ದೇಶದ ಅಭಿವೃದ್ಧಿಗೆ ಭ್ರಷ್ಟಅಧಿಕಾರಿಗಳೇ ಅಡ್ಡಗಾಲುಗಳು.

ಸರಕಾರದ ಲೆಕ್ಕಕ್ಕೆ ಸಿಗದ ಆರ್ಥಿಕತೆಯೂ ನಮ್ಮಲ್ಲಿ ಹೇರಳವಾಗಿದೆ. ಅದೂ ಮತ್ತು ಭೂಗತ ಆರ್ಥಿಕತೆಗಳೂ ಸರಕಾರಕ್ಕೆ ಕರವನ್ನು ಕೊಡದೇ ಸರಕಾರದ ವರಮಾನವನ್ನು ಕಡಿಮೆ ಮಾಡಿ ಆ ಮೂಲಕ ಅಭಿವೃದ್ಧಿಗೆ ತಡೆಯೊಡ್ಡುತ್ತವೆ.

ಉದ್ಯೋಗ ಹಾಗೂ ನಿರುದ್ಯೋಗ:

ವ್ಯಾಪಾರ ವಿಸ್ತರಿಸಲ್ಪಟ್ಟರೆ, ಹೆಚ್ಚಿನ ಉದ್ಯೋಗಾವಕಾಶ ಹಾಗೂ ಹೆಚ್ಚಿನ ವೇತನ ಎಂದರ್ಥವೇನಲ್ಲ. ಅತ್ಯಂತ ಬಡ ದೇಶಗಳಲ್ಲಿ ಆಯಾ ದೇಶದ ವ್ಯಾಪಾರ ಹಾಗೂ ಬಂಡವಾಳದ ವಿಸ್ತರಣೆಗೆ ಹೋಲಿಸಿದರೆ, ಉದ್ಯೋಗ ಸೃಷ್ಟಿಯು ಆಗಿಯೇ ಇಲ್ಲ.
35 ದಶಲಕ್ಷಕ್ಕೂ ಹೆಚ್ಚು ನಿರುದ್ಯೋಗಿಗಳಿದ್ದಾರೆ. ಇನ್ನೂ 10 ದಶಲಕ್ಷ ಜನ ಕೆಲಸ ಹುಡುಕುವುದನ್ನೇ ಬಿಟ್ಟಿರುವುದರಿಂದ ಅವರನ್ನು ಲೆಕ್ಕಕ್ಕೆ ಹಿಡಿದಿಲ್ಲ. ಯುವ ಜನರಲ್ಲಿ ಪ್ರತಿ 5ಕ್ಕೆ ಒಬ್ಬರು ನಿರುದ್ಯೋಗಿಗಳಾಗಿರುತ್ತಾರೆ.

ಬಹುರಾಷ್ಟ್ರೀಯ ಕಂಪನಿಗಳ ಹೊಸ ಆರ್ಥಿಕ ವ್ಯವಸ್ಥೆ ಎಂದರೆ ಶ್ರೀಮಂತ ಹಾಗೂ ಬಡ ರಾಷ್ಟ್ರಗಳೆರಡರಲ್ಲೂ ಉದ್ಯೋಗ ನಷ್ಟ ಮತ್ತು ಹದಗೆಟ್ಟ ಉದ್ಯೋಗ ಪರಿಸ್ಥಿತಿ ಎಂದರ್ಥ. ಜಾಗತಿಕ ಸ್ಪರ್ಧೆಯ ಉದ್ದೇಶದಿಂದ ಹಲವು ಸಂಸ್ಥೆಗಳು, ತಮ್ಮ ಕಾರ್ಮಿಕ ನೀತಿಗಳನ್ನು

ಸಡಿಲಿಸಿರುವುದರಿಂದ, ಮಾಲಿಕ ಹಾಗೂ ಕೆಲಸಗಾರರ ನಡುವಿನ ಸಂಬಂಧವು ಅಲ್ಪ ಕಾಲಾವಧಿಯದ್ದಾಗಿ ಪರಿವರ್ತನೆಗೊಂಡಿದೆ.

ಸ್ಥಳಾಂತರ:

ಇತ್ತೀಚಿನ ದಿನಗಳಲ್ಲಿ ಜನರು ವಲಸೆ ಹೋಗುವುದು, ತೀರಾ ಹೆಚ್ಚುತ್ತಿದೆ. ಇಂದಿನ ಜಾಗತಿಕ ವ್ಯವಸ್ಥೆಯಲ್ಲಿ, ಅವಕಾಶಗಳೂ ಒಂದೇ ತೆರನಾಗಿರುವುದಿಲ್ಲ, ಮನುಷ್ಯನ ಮೇಲೆ ಅವುಗಳ ಪರಿಣಾಮವೂ ಒಂದೇ ತೆರನಾಗಿರುವುದಿಲ್ಲ. ಜಾಗತಿಕ ಉದ್ಯೋಗಾವಕಾಶಗಳು ಕೆಲವರಿಗೆ ತೆರೆದಿವೆ. ಆದರೆ ಹೆಚ್ಚಿನ ಜನರಿಗೆ ಇದ್ದ ಅವಕಾಶವೂ ಮುಚ್ಚಿಹೋಗಿದೆ. ಪರಿಣಿತ ವೃತ್ತಿಗಳಿಗೆ ಅವಕಾಶ ಹೆಚ್ಚಾಗಿವೆ, ಕೌಶಲ್ಯ ರಹಿತ ವೃತ್ತಿಗಳಿಗೆ ಅವಕಾಶ ಇಲ್ಲ.

ಯಾವಾಗ ತಾನು ಕೆಲಸಕ್ಕಾಗಿ ಬೇರೆ ಕಡೆ ಹೋಗಬೇಕು ಎಂಬ ಆಯ್ಕೆ ಕೆಲವು ವಲಸಿಗರಿಗೆ ಮಾತ್ರ ಇದೆ. ಎಷ್ಟೋ ದಶಲಕ್ಷ ಜನರು ಸದಾ ಕೆಲಸ ಹುಡುಕಿಕೊಂಡು ಅಲೆಯುತ್ತಿರಲೇ ಬೇಕು. ಅವಕಾಶಗಳು ಅವರನ್ನೆಂದೂ ಹುಡುಕಿಕೊಂಡು ಬರುವುದಿಲ್ಲ. ಬರ, ಪ್ರವಾಹ, ಯುದ್ಧ, ಅರಾಜಕತೆಯಂತಹ ಪರಿಸ್ಥಿತಿಯಿಂದಾಗಿ, ಇನ್ನೆಷ್ಟೋ ದಶಲಕ್ಷ ಜನರು ಬಲವಂತವಾಗಿ ತಮ್ಮ ಸ್ಥಳದಿಂದ ಹೊರದೂಡಲ್ಪಡುತ್ತಾರೆ. ಅನೇಕ ಬಾರಿ ಸಮಸ್ಯೆಗಳು ಮಾನವ ನಿರ್ಮಿತವೇ. ಅಣೆಕಟ್ಟಿನಿಂದ ಪ್ರವಾಹ, ಪರಿಸರ ನಾಶದಿಂದ ಅನಾವೃಷ್ಟಿ ಇತ್ಯಾದಿಗಳೂ ಜನರ ವಲಸೆಗೆ ಕಾರಣವಾಗುತ್ತವೆ.

ಜನರು ವಲಸೆ ಹೋದರೆಂದರೆ ಅದು ಆ ಪ್ರದೇಶಕ್ಕೂ ನಷ್ಟವೇ. ದುಡಿಯುವ ಮುಖ್ಯ ಜನಸಂಖ್ಯೆ ಇಲ್ಲದೆ ಅಲ್ಲಿನ ಆರ್ಥಿಕ ವ್ಯವಸ್ಥೆಯು ತಲ್ಲಣಿಸುತ್ತದೆ. ಲೆಸೋತೋ ದೇಶದಲ್ಲಿ 60%ಕ್ಕೂ ಹೆಚ್ಚು ಪುರುಷರು ದಕ್ಷಿಣ ಆಫ್ರಿಕಾದ ಗಣಿಗಳಲ್ಲಿ ದುಡಿಯಲು ಪ್ರತಿವರ್ಷ

ಹೋಗಿಬಿಡುತ್ತಾರೆ. ವಲಸೆ ಹೋಗುವ ಹೆಚ್ಚಿನವರು ಸಣ್ಣ ಪ್ರಾಯದವರು ಮತ್ತು ಒಳ್ಳೆಯ ದುಡಿಮೆಗಾರರು. ದೇಶದ ಸಂಪತ್ತು ಅವರು. ಕೇವಲ ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಮಾತ್ರ ಹಿಂದೆ ಉಳಿಯುತ್ತಾರೆ. ಗಂಡಸರು ವಲಸೆ ಹೋದಾಗ ಚಿಕ್ಕ ಪುಟ್ಟ ಉದ್ಯೋಗವನ್ನು ಮಾಡುತ್ತ ಮಹಿಳೆಯರೇ ಕುಟುಂಬ ನಿರ್ವಹಣೆ ಮಾಡಬೇಕಾಗುತ್ತದೆ.

ಇತ್ತೀಚೆಗೆ ವರ್ಣ, ಧರ್ಮ, ಜಾತಿ, ಪಂಗಡಗಳ ನಡುವೆ ಅಸಹನೆ ಹೆಚ್ಚಿ , ಆ ಕಾರಣದಿಂದಾಗಿಯೇ ಸಮಾಜದ ಶಾಂತಿ ಕದಡಿ, ಗಲಭೆಗಳು ಒಮ್ಮೆಗೇ ಹೆಚ್ಚಾಗುತ್ತಿವೆ. ಇದಕ್ಕೆ ಮೂಲ ಕಾರಣ ಬಡವರು–ಶ್ರೀಮಂತರ ಮಧ್ಯೆ ಅಂತರ ಹೆಚ್ಚಾಗಿದ್ದು. ಗಳಿಕೆ, ಭಾಗವಹಿಸುವುದಕ್ಕೆ ಅವಕಾಶ, ಸಂಗ್ರಹವಾದ ಸಂಪತ್ತು, ಶಿಕ್ಷಣ–ವಸತಿ ಮತ್ತು ಉದ್ಯೋಗದಂಥ ಸಾಮಾಜಿಕ ಪರಿಸ್ಥಿತಿ ಇವೆಲ್ಲವುಗಳಲ್ಲೂ ಅಸಮಾನತೆಯು ವ್ಯಕ್ತವಾಗುತ್ತಿರುತ್ತದೆ. ಕೋಮು ಗಲಭೆಗಳು, ಆಂತರಿಕ ಯುದ್ಧಗಳು ಜನರನ್ನು ಕೊಲ್ಲುವುದು ಹಾಗೂ ಮೌನಗೊಳಿಸುವುದಕ್ಕಿಂತ ಹೆಚ್ಚಾಗಿ ಸಮಾಜವನ್ನೇ ಛಿದ್ರಗೊಳಿಸುವಂಥ ದೀರ್ಘಾವಧಿ ದುಷ್ಪರಿಣಾಮಗಳನ್ನು ಬೀರುತ್ತವೆ. ಪರಿಸರ ನಾಶವಾಗುತ್ತದೆ, ಸಮುದಾಯಗಳು ಶಕ್ತಿಹೀನವಾಗುತ್ತವೆ ಮತ್ತು ಸಾರ್ವಜನಿಕ ಸೇವೆಗಳು ಕುಸಿದು ಬೀಳುತ್ತವೆ.

ಅಂತಾರಾಷ್ಟ್ರೀಯ ಅಪರಾಧ

ಅಪರಾಧದ ಜಗತ್ತು ಕೂಡಾ ಒಂದು ಉದ್ದಿಮೆ ಎಂದರೆ ನಂಬುತ್ತೀರಾ? ಆದರದು ನಿಜ. ಜಾಗತೀಕರಣವು ಈ ಉದ್ದಿಮೆಯ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುತ್ತಿದೆ. ಆಧುನಿಕ ಸಂಪರ್ಕ ಸಾಧನಗಳು, ಸಾರಿಗೆ, ಮತ್ತು ಸಡಿಲಗೊಂಡ ಗಡಿ ನಿಯಂತ್ರಣಗಳಿಂದಾಗಿ ಜಾಗತಿಕ ಅಪರಾಧ ಹೆಚ್ಚಾಗುತ್ತಿದೆ. ಸಂಘಟಿತ ಅಪರಾಧದ ಒಟ್ಟು ಆದಾಯ ಒಂದು ವರ್ಷಕ್ಕೆ 1.5 ಸಹಸ್ರ ಕೋಟಿ

ಡಾಲರ್‌ಗಳಷ್ಟಾಗುತ್ತದೆ. ಮಾದಕ ವಸ್ತುಗಳು, ಶಸ್ತ್ರಾಸ್ತ್ರ ಮತ್ತು ಮಹಿಳೆಯರ ವ್ಯಾಪಾರಗಳಿಂದಾಗಿ, ನೆರೆಹೊರೆ ರಾಷ್ಟ್ರಗಳು ಘರ್ಷಣೆಯಲ್ಲಿ ತೊಡಗುವುದು ಸಾಮಾನ್ಯವಾಗಿದೆ.

ಮಾದಕ ದ್ರವ್ಯಗಳಿಂದ, ಇಂದಿನ ಆಧುನಿಕ ಅಪರಾಧಕ್ಕೆ, ಅಪಾರ ಹಣ ಹರಿದು ಬರುತ್ತಿದೆ. ಅನೈತಿಕ ಮಾದಕ ದ್ರವ್ಯಗಳು, ಅದನ್ನು ಬೆಳೆಯುವ ಹಾಗೂ ಉಪಯೋಗಿಸುವ ಎರಡೂ ದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ. ಈ ವ್ಯಾಪಾರದಲ್ಲಿ ತೊಡಗಿರುವ ಗುಂಪುಗಳು, ಕಳ್ಳಸಾಗಣಿಕೆದಾರರು ತಮ್ಮ ವೃತ್ತಿ ಉಳಿಸಿಕೊಳ್ಳಲು, ಕೊಲೆ, ಸುಲಿಗೆ, ಭ್ರಷ್ಟಾಚಾರ ಮುಂತಾದ ಯಾವುದೇ ಹಾದಿ ತುಳಿಯುತ್ತಾರೆ. ಜಗತ್ತಿನ 8% ರಷ್ಟು ವ್ಯಾಪಾರದ ಅಂಶ, ಅನೈತಿಕ ಮಾದಕ ದ್ರವ್ಯ ವ್ಯಾಪಾರದ್ದಾಗಿದೆ.

ಈ ಎಲ್ಲಾ ಅಂಶಗಳು, ಕುಟುಂಬದ ಮೇಲೆ ಅದರಲ್ಲೂ, ಮಹಿಳೆ ಹಾಗೂ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತವೆ. ಅತ್ಯಂತ ಹತ್ತಿರದ ಸಂಬಂಧದಲ್ಲೂ ಮೂರರಲ್ಲಿ ಒಬ್ಬ ಮಹಿಳೆ ದೌರ್ಜನ್ಯಕ್ಕೊಳಗಾಗುತ್ತಾರೆ. ಪ್ರತಿವರ್ಷ ಮಹಿಳೆಯರು ಹಾಗೂ 18ಕ್ಕಿಂತ ಕೆಳ ವಯಸ್ಸಿನ ಹುಡುಗಿಯರಲ್ಲಿ 1.2 ದಶಲಕ್ಷ ಜನ ಮಾರಾಟ ಆಗುತ್ತಾರೆ. 1990ರಲ್ಲಿ ಸುಮಾರು 3 ಲಕ್ಷದಷ್ಟು ಮಕ್ಕಳು ಬಂದೂಕು ತರಬೇತಿ ಪಡೆಯುವವರಾಗಿದ್ದಾರೆ ಹಾಗೂ 6 ದಶಲಕ್ಷದಷ್ಟು ಮಕ್ಕಳು ಗಾಯಗೊಂಡಿದ್ದಾರೆ.

ದುರ್ಬಲಗೊಂಡ ಕುಟುಂಬಗಳು:



ಕುಟುಂಬವು ಯಾವತ್ತೂ ಸಹ ಮೂಲ ಭದ್ರತೆಯ ಭಾವನೆ ನೀಡುತ್ತದೆ. ಯಾವುದೇ ವ್ಯವಸ್ಥೆ ಸೋತಾಗಲೂ, ಕುಟುಂಬದ ಮೇಲೆ ಅವಲಂಬಿಸಬಹುದು ಎಂದು ಜನರು ಭಾವಿಸಿರುತ್ತಾರೆ. ಸರ್ಕಾರಗಳು ದುರ್ಬಲಗೊಂಡಿರುವ ಇಂದಿನ ಸಮಾಜದಲ್ಲಿ ಇದು ಬಹಳ ಮುಖ್ಯವಾಗುತ್ತದೆ. ಆದರೆ ಇಂದು ಕುಟುಂಬಗಳೂ ಸಹ ತೀವ್ರ ಒತ್ತಡಕ್ಕೆ ಒಳಗಾಗಿದೆ. ಅದರ ಪರಿಣಾಮ ವಿವಾಹ ವಿಚ್ಛೇದನ.

ಮುಂದುವರಿದ ರಾಷ್ಟ್ರಗಳಲ್ಲಂತೂ 1/3ರಷ್ಟು ಮದುವೆಗಳು ವಿವಾಹ ವಿಚ್ಛೇದನದಲ್ಲಿ ಕೊನೆಗೊಳ್ಳುತ್ತವೆ. ಹಾಗೂ 20% ಮಕ್ಕಳು ವಿವಾಹದ ಚೌಕಟ್ಟಿಲ್ಲದೆಯೇ ಜನಿಸುತ್ತಾರೆ. ಇಂದು ಡ್ರಗ್ ಸೇವನೆ, ಅಪರಾಧದಂತಹ ಸಮಸ್ಯೆಗಳಿಗೆ ಕುಟುಂಬವನ್ನೂ ಸಹ ಹೊಣೆಗಾರರಾಗಿ ಮಾಡಲಾಗುತ್ತಿದೆ.

ತಾಯಿಯೊಬ್ಬಳೇ ಮಗುವನ್ನು ಸಾಕುವ ಒಂಟಿ ಪೋಷಕ ಕುಟುಂಬಗಳು ಹೆಚ್ಚಾಗುತ್ತಿವೆ. ಅಂಥ ಕುಟುಂಬಗಳು ಕೆಲವು ಅನಾನುಕೂಲಗಳನ್ನು ಎದುರಿಸುತ್ತವೆ. ಆರ್ಥಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ತಾರತಮ್ಯವನ್ನು ಮಹಿಳೆ ಅನುಭವಿಸುತ್ತಿರುವುದರಿಂದ ಈ ಅನಾನುಕೂಲಗಳು. ಇತ್ತೀಚಿನ ದಿನಗಳ ಒತ್ತಡ, ಮಹಿಳೆಯರಿಗೆ ಮತ್ತಷ್ಟು ಸಮಸ್ಯೆ ಉಂಟುಮಾಡುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ 40%ರಷ್ಟು ಕಾರ್ಮಿಕ ಶಕ್ತಿ ಮಹಿಳೆಯರದ್ದಾಗಿದೆ. ಹಲವು ರಾಷ್ಟ್ರಗಳಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟು, ಮಹಿಳೆಯರ ಕೆಲಸದ ಭಾರವನ್ನು ಮತ್ತಷ್ಟು ಹೆಚ್ಚಿಸಿದೆ. ಮಹಿಳೆಯರು ಮನೆಯಲ್ಲಿ ಮಾಡುವ ಕೆಲಸಗಳಿಗೆ ವೇತನ ಇಲ್ಲದ್ದರಿಂದ, ಅದಕ್ಕೆ ಹೆಚ್ಚಿನ ಗೌರವವೂ ಇಲ್ಲ. ಇದೆಲ್ಲವೂ 'ಹೊಂದಾಣಿಕೆ' ಎನಿಸಲ್ಪಡುತ್ತಿದೆ. ತಮ್ಮ ತಾಯಂದಿರ ಭಾರ ತಗ್ಗಿಸುವ ಸಲುವಾಗಿ ಹೆಣ್ಣು ಮಕ್ಕಳು ಶಾಲೆ ಬಿಡುತ್ತಿದ್ದಾರೆ.

ಹೆಚ್.ಐ.ವಿ/ಏಡ್ಸ್‌ನಿಂದಾಗಿ ತಬ್ಬಲಿಗಳ ಸಂಖ್ಯೆ ಅಪಾರವಾಗುತ್ತಿದೆ. ಸೋಂಕು ಸುರುವಾದಾಗಿನಿಂದ ಇಲ್ಲಿಯವರೆಗೆ 13.2 ದಶಲಕ್ಷ ಮಕ್ಕಳು, ಹೆಚ್ಚಿನವರು –ಸಹಾರಾ ಸುತ್ತಲಿನ ದೇಶಗಳ– ಮಕ್ಕಳು ಅನಾಥರಾಗಿದ್ದಾರೆ. ಈ ಮಕ್ಕಳು ತಮ್ಮ ಬಂಧುಗಳ ಮೇಲೆ ಅಥವಾ ಸಂಸ್ಥೆಗಳ ಮೇಲೆ ಅವಲಂಬಿತರಾಗಬೇಕಿದೆ. ಹೆಚ್.ಐ.ವಿ/ಏಡ್ಸ್ ಸಮಸ್ಯೆ ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗುವ ಅಪಾಯ ಇದೆ.

ಮಕ್ಕಳು:

ತಾಯ್ತಂದೆಯರನ್ನು ಕಾಡುತ್ತಿರುವ ಸಮಸ್ಯೆಗಳು ಮಕ್ಕಳನ್ನೂ ಸಹ ಕಾಡುತ್ತವೆ. ಮುಂದುವರಿದ ದೇಶಗಳಲ್ಲಿ ಐವತ್ತರ ದಶಕರಿಂದ ಎಪ್ಪತ್ತರ ದಶಕದ ನಡುವೆ

ಮಕ್ಕಳು ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದರು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪ್ರಗತಿ ನಿಧಾನವಾಗಿದೆ ಅಥವಾ ನಿಂತೇ ಹೋಗಿದೆ. ಮಕ್ಕಳು ಶಾಲೆ ಬಿಡುತ್ತಿರುವ, ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಿರುವ, ದೈಹಿಕ, ಲೈಂಗಿಕ ದೌರ್ಜನ್ಯಗಳಲ್ಲಿ ಪಾಲ್ಗೊಳ್ಳುತ್ತಿರುವ ಸಂಖ್ಯೆ ಹೆಚ್ಚಾಗುತ್ತಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಮಕ್ಕಳು, ಇನ್ನೂ ಹೆಚ್ಚಿನ ಒತ್ತಡ ಅನುಭವಿಸುತ್ತಾರೆ. ಮಕ್ಕಳ ಸಾಯುವ ಪ್ರಮಾಣ ಕಡಿಮೆಯಾಗಿದ್ದರೂ, ಒತ್ತಡದಲ್ಲಿ ಬದುಕುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ.

ಅಭಿವೃದ್ಧಿ ಶೀಲ ದೇಶಗಳಲ್ಲಿ ಸುಮಾರು 250 ದಶಲಕ್ಷ ಮಕ್ಕಳು (140 ದಶಲಕ್ಷ ಗಂಡು + 110 ದಶಲಕ್ಷ ಹೆಣ್ಣು) ಬಾಲಕಾರ್ಮಿಕರಾಗಿದ್ದಾರೆ. ಬಡತನ ಹಾಗೂ ಕಡಿಮೆ ವೇತನ, ಮಕ್ಕಳು ಕೆಲಸ ಮಾಡಲು ಕಾರಣವಾಗಿವೆ. ತಾಯ್ತಂದೆಯರ ಸಂಪಾದನೆ ಸಾಲದ್ದರಿಂದ ಮಕ್ಕಳು ದುಡಿಯಬೇಕಾಗುತ್ತದೆ. ಕಡಿಮೆ ವೇತನದ ಕಾರಣ ಮಾಲಿಕರೂ, ಮಕ್ಕಳ ಕೆಲಸಕ್ಕೇ ಆದ್ಯತೆ ಕೊಡುತ್ತಾರೆ.

ಮುಂದಿನ ಭವಿಷ್ಯ:

ಸಾರ್ವಜನಿಕ ಆರೋಗ್ಯವೇ ಪ್ರಮುಖವೆನಿಸುವ ಸ್ಥಳೀಯ, ರಾಷ್ಟ್ರೀಯ, ಕ್ಷೇತ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ನೀತಿಯೊಂದನ್ನು ಹುಟ್ಟುಹಾಕಲು ಬೇಕಾಗುವ ಸವಾಲುಗಳು ನಮ್ಮ ಮುಂದಿವೆ. 'ಲಾಭಕ್ಕಲ್ಲ, ಜನರಿಗಾಗಿ' ಎಂದು ಹೇಳುವ ಪರಿಸ್ಥಿತಿ, ಪರಿಸರ, ಮಾನವ ಹಾಗೂ ಸಮುದಾಯ ಸಂಪನ್ಮೂಲ ರಚಿತವಾಗಬೇಕಿದೆ.

ಜಾಗತೀಕರಣವು ಅಭಿವೃದ್ಧಿ ಹೊಂದಲು ಕೆಲವರಿಗೆ ಅವಕಾಶ ನೀಡಿದರೂ, ಹೆಚ್ಚಿನವರು ಇದರಿಂದ ಹೊರಗೆ ಉಳಿಯುತ್ತಾರೆ. ಹಾಗಾಗಿ ಅವರ ಭದ್ರತೆಯ ಪ್ರಶ್ನೆಯು ಉಳಿಯುತ್ತದೆ. ಆರ್ಥಿಕತೆ, ಸಂಸ್ಕೃತಿ ಹಾಗೂ ಆಡಳಿತವನ್ನು ಸಮಗ್ರಗೊಳಿಸುವ ಪ್ರಯತ್ನವನ್ನು ಅದು ಮಾಡಿದರೂ, ಬಡತನ ನಿರ್ಮೂಲನೆ ಹಾಗೂ ಮಾನವ ಅಭಿವೃದ್ಧಿಯಂತಹ ಸಾಮಾಜಿಕ ಸಮಸ್ಯೆಗಳನ್ನು ಪೂರ್ತಿ ಕಡೆಗಣಿಸಿದೆ.

ಬಡತನವನ್ನು ಹಿಮ್ಮೆಟ್ಟಿಸುವ ಕೆಲಸ ನಮ್ಮ ನೈತಿಕ ಹಾಗೂ ರಾಜಕೀಯ ಸವಾಲಾಗಬೇಕು. ಸಮಗ್ರವಾದ ದೀರ್ಘಾವಧಿ ಯೋಜನೆಗಳಿಂದ ಮಾತ್ರ ಅದು ಸಾಧ್ಯ.

ಯಾವುದೇ ಅಭಿವೃದ್ಧಿಯನ್ನು ಅಳೆಯಲು ಅತ್ಯುತ್ತಮ ಮಾನದಂಡ ಎಂದರೆ **ಸಮತೆ.** ಸಾಮಾಜಿಕ ಅಸಮಾನತೆಯನ್ನು ತೊಲಗಿಸುವುದೇ ಅಭಿವೃದ್ಧಿಯ ಮೂಲಸ್ತಂಭ.

ಅಭಿವೃದ್ಧಿಗೆ ಎರಡು ಬಹುಮುಖ್ಯ ಮಾರ್ಗಗಳೆಂದರೆ **'ಶಿಕ್ಷಣ ಹಾಗೂ ಉದ್ಯೋಗ'**. ಸಮತೆ, ಅಭಿವೃದ್ಧಿ ಹಾಗೂ ನಾಗರಿಕತೆಯ ಮೇಲೆ ಶಿಕ್ಷಣವು ಪ್ರಭಾವ ಬೀರುವುದರಿಂದ, ಸಾರ್ವಜನಿಕ ನೀತಿ ಸಂಹಿತೆಯಲ್ಲಿ ಮತ್ತು ಸಾರ್ವಜನಿಕ ವೆಚ್ಚದಲ್ಲಿ ಅದಕ್ಕೆ ಮುಖ್ಯ ಆದ್ಯತೆ ದೊರೆಯಬೇಕು. ಅದರಲ್ಲಿಯೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಹೆಣ್ಣು ಮಕ್ಕಳು ಪ್ರೌಢ ಶಿಕ್ಷಣದವರೆಗೆ ಶಿಕ್ಷಣ ಹೊಂದಿದರೆ ಬಡತನ ಹೋಗಲಾಡಿಸಬಹುದು ಎಂಬುದನ್ನು ದಕ್ಷಿಣ ಅಮೇರಿಕಾ ಅಧ್ಯಯನವೊಂದು ಸಾಬೀತು ಮಾಡಿದೆ. ಉತ್ತಮ ಉದ್ಯೋಗಾವಕಾಶ ಸೃಷ್ಟಿಗೂ ಪ್ರಾಧಾನ್ಯ ಕೊಡಬೇಕು.

ಪ್ರಶ್ನೆಗಳು :

- ನಿಮ್ಮ ಸಮುದಾಯದಲ್ಲಿ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಮಾಜಿಕ ಅಂಶಗಳಾವುವು?
- ನಿಮ್ಮ ಸಮುದಾಯದಲ್ಲಿ ಹಿಂಸೆ / ದೌರ್ಜನ್ಯ ಸಮಸ್ಯೆಯೇ?
- ಮಹಿಳೆ ಮತ್ತು ಮಕ್ಕಳ ಸ್ಥಿತಿಗತಿ ಏನು?
- ನಿಮ್ಮ ಸರ್ಕಾರ ಜನರ ಅಗತ್ಯಗಳಿಗೆ ಸ್ಪಂದಿಸುತ್ತಿದೆಯೇ?

ಜನಾರೋಗ್ಯ ಆಂದೋಲನದ ಕಿರು ಪರಿಚಯ

ಹುಟ್ಟು : 1978ರಲ್ಲಿ ಅಂದಿನ ಸೋವಿಯತ್ ರಷ್ಯಾದ ಕಜಾಕಿಸ್ತಾನ್ ದೇಶದ ಆಲ್ಮಾ-ಆಟ ಎಂಬ ಜಾಗದಲ್ಲಿ 134 ದೇಶಗಳು "ಸರ್ವರಿಗೂ ಆರೋಗ್ಯ - 2000ದೊತ್ತಿಗೆ" ಎಂಬ ಘೋಷಣೆಯನ್ನು ಮಾಡಿದವು. 'ಪ್ರಾಥಮಿಕ ಆರೋಗ್ಯ ಪಾಲನೆ'ಯ ಮಾರ್ಗವನ್ನು ಹಮ್ಮಿಕೊಂಡು, ಸರ್ವರಿಗೂ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸುಸ್ಥಿತಿಯನ್ನು ಪಡೆಯುವಂತಹ ಪರಿಸರವನ್ನು ನಿರ್ಮಿಸುತ್ತೇವೆಯೆಂದೂ ಪ್ರಮಾಣ ಮಾಡಿದರು.

ಆದರೆ, 1990ರ ನಂತರ ಭಾರತ ಮತ್ತು ಜಗತ್ತಿನಾದ್ಯಂತ ರಾಷ್ಟ್ರಗಳು ಅಂಗೀಕರಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ನೀತಿಯಿಂದ, ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ಮತ್ತು "ಸರ್ವರಿಗೂ ಆರೋಗ್ಯ 2000ದೊತ್ತಿಗೆ" ಈ ಘೋಷಣೆಯನ್ನು ಮರೆತವು. ಆಲ್ಮಾ-ಆಟ ಘೋಷಣೆಯ ತದ್ವಿರುದ್ಧ ಮಾತೃ ಮರಣ, ಶಿಶುಮರಣ, ಅಪೌಷ್ಠಿಕತೆ, ದುರ್ಬಲ ವರ್ಗದವರ ಆರೋಗ್ಯದ ಹಕ್ಕಿನ ಉಲ್ಲಂಘನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿತು. ಹಾಗಾಗಿ 2000ನೇ ಇಸವಿಯಲ್ಲಿ ಜಗತ್ತಿನಾದ್ಯಂತ ಚರ್ಚೆ ಮತ್ತು ಚಳುವಳಿಗಳು ಪ್ರಾರಂಭವಾದವು. 2000ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ,ಬಾಂಗ್ಲಾದೇಶದ ಢಾಕಾ ನಗರದಲ್ಲಿ , 110 ದೇಶಗಳ ಪ್ರತಿನಿಧಿಗಳು ಸೇರಿ ಮೊದಲ ಅಂತರಾಷ್ಟ್ರೀಯ 'ಜನಾರೋಗ್ಯ ಸಭೆ' ಯನ್ನು ನಡೆಸಿದರು. ಆರೋಗ್ಯವು ಜನರ ಹಕ್ಕಾಗಬೇಕಾದರೆ ಚಳುವಳಿಯೇ ನಡೆಯಬೇಕು ಎಂಬ ನಿರ್ಧಾರ ಮತ್ತು ವಿಶ್ವಾಸದೊಂದಿಗೆ ಅಂತರಾಷ್ಟ್ರೀಯ ಜನಾರೋಗ್ಯ ಆಂದೋಲನ (ಪೀಪಲ್ಸ್ ಹೆಲ್ತ್ ಮೂವ್‌ಮೆಂಟ್) ಹುಟ್ಟಿಕೊಂಡಿತು. ಭಾರತದಲ್ಲಿ ಇದನ್ನು 'ಜನ ಸ್ವಾಸ್ಥ್ಯ ಅಭಿಯಾನ್' ಮತ್ತು ಕರ್ನಾಟಕದಲ್ಲಿ ಇದನ್ನು 'ಜನಾರೋಗ್ಯ ಆಂದೋಲನ-ಕರ್ನಾಟಕ' ಎಂದು ಗುರುತಿಸಿದ್ದಾರೆ. ಈ ಚಳುವಳಿಯ ಮೂಲ ಮಂತ್ರ ಸರ್ವರಿಗೂ ಆರೋಗ್ಯ - ಇಂದೇ!!, ಅರ್ಥಾತ್ ಆರೋಗ್ಯವು ಪ್ರತಿಯೊಬ್ಬರ ಮೂಲಭೂತ ಮಾನವ ಹಕ್ಕಾಗಬೇಕು.

ಸಂಪರ್ಕ ವಿಳಾಸ

JAAK Secretariat, C/o Community Health Cell
359, Srinivasa Nilaya, I Main, I Block, Koramangala, Bangalore–560 034
Phone : 080 - 2553 1518 Telefax: 2552 5372
E-mail : jaaksecretariat@gmail.com

ಜನಾರೋಗ್ಯ ಆಂದೋಲನ ಚಳುವಳಿಯ ಗುರಿ

ಆರೋಗ್ಯಪಾಲನೆಯು ಪ್ರತಿಯೊಬ್ಬರ ಮೂಲಭೂತ ಸಾಂವಿಧಾನಿಕ ಹಕ್ಕಾಗಬೇಕು. ಇದರ ಘಟಕಾಂಶಗಳು :

1. ಆರೋಗ್ಯ ಪಾಲನೆಗೆ ಬೇಕಾದ ಮೂಲ ಸೌಕರ್ಯವುಳ್ಳ ಸುಸಜ್ಜಿತ, ದಕ್ಷತೆಯ, ಗುಣಮಟ್ಟದ ಸೇವೆ ನೀಡುವ ಆರೋಗ್ಯ ವ್ಯವಸ್ಥೆ. ಈ ಆರೋಗ್ಯ ಸೇವೆಯು ಎಲ್ಲರಿಗೂ (ಸಾರ್ವತ್ರಿಕವಾಗಿ) ಕೈಗೆಟುಕುವ ರೀತಿಯಲ್ಲಿ..... ಸಮಂಜಸ ಸೇವೆಗಳಾಗಿರಬೇಕು.

2. ಆರೋಗ್ಯ ವ್ಯವಸ್ಥೆ ಗುಣಮಟ್ಟದ ಸೇವೆ ಕೊಡಲು ಪೂರಕವಾದ ಬಜೆಟ್ / ಹಣಕಾಸು.

3. ಆರೋಗ್ಯದ ಹಕ್ಕಿನ ಉಲ್ಲಂಘನೆ ಮಾಡುವ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ನುಂಗುತ್ತಿರುವ ಖಾಸಗೀ ವೈದ್ಯಕೀಯ ಕ್ಷೇತ್ರವನ್ನು ನಿಯಂತ್ರಿಸುವ ಕಾಯಿದೆಯೂ ಬೇಕು.

4. ಕೈಗೆಟುಕುವ ದರದಲ್ಲಿ ಅತ್ಯವಶ್ಯಕ ಔಷಧಿಗಳ ಲಭ್ಯತೆ.

5. ರೋಗಿಗಳಿಗೆ ಮಾಹಿತಿ, ರೋಗಿಗಳ ಹಕ್ಕುಗಳನ್ನು ಗೌರವಿಸುವ ಮತ್ತು ರೋಗಿಗಳಿಗಾಗುವ ಅನ್ಯಾಯವನ್ನು / ಕುಂದುಕೊರತೆಗಳನ್ನು ನಿಯಂತ್ರಿಸುವ ಪ್ರಾಧಿಕಾರ / ಯಂತ್ರಾಂಗ ಇರಬೇಕು.

6. ಸಮುದಾಯದ ಮೇಲ್ವಿಚಾರಣೆ ಮತ್ತು ಸಮುದಾಯದ ಆರೋಗ್ಯ ಯೋಜನೆಯನ್ನು ಪರಿಗಣಿಸುವ ವ್ಯವಸ್ಥೆ.

7. ವಿಶೇಷ ಅಗತ್ಯಗಳಿರುವ ಜನಸಮುದಾಯಗಳ (ಮಹಿಳೆಯರು ಅಂಗವಿಕಲರು, ಮಾನಸಿಕ ರೋಗಿಗಳು, ವೃದ್ಧರು, ಹೆಚ್.ಐ.ವಿ. – ಏಯ್ಡ್ಸ್ ಜೊತೆ ಬಾಳುವವರು, (PLHA) ಇತ್ಯಾದಿ) ಅಗತ್ಯತೆಗಳನ್ನು ಪೂರೈಸುವ ವ್ಯವಸ್ಥೆ.

ಈ ನಿಟ್ಟಿನಲ್ಲಿ, ಆರೋಗ್ಯ ಪಾಲನೆಯ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು.

ಸರ್ವರಿಗೂ ಆರೋಗ್ಯ - ಇಂದೇ ಸಿಗಲಿ - ಇಂದೇ ಸಿಗಲಿ, ಇಂದೇ ಸಿಗಲಿ!!!